

ಹೇಳಿದರು. 'ಮಕ್ಕಳೇ, ಇರುವ ನಾಲ್ಕು ಜನರಲ್ಲಿ ಹೊರಗಿನವರು ಯಾರೂ ಬರುವ ಪ್ರಮೇಯವೇ ಇಲ್ಲ. ನಿಮ್ಮಿಬ್ಬರಲ್ಲಿ ಒಬ್ಬರು ಕದ್ದಿರುವುದು ನಿಜ, ಒಪ್ಪಿಕೊಳ್ಳಿ. ಇಲ್ಲವಾದರೆ ಸ್ಕ್ಯಾನಿಂಗ್ ಮಷಿನ್ ಮೂಲಕ ಪತ್ತೆ ಹಚ್ಚಬೇಕಾಗುತ್ತದೆ. ಅದರಿಂದ ಹೊಟ್ಟೆಯೊಳಗಿನ ಉಂಡೆ ಪರದೆಯ ಮೇಲೆ ಕಾಣುತ್ತದೆ. ಕನಿಷ್ಠ ಉಂಡೆಯೊಳಗಿನ ಅಂಟಾದರೂ ಕಾಣುತ್ತದೆ. ಖಂಡಿತ ಸಿಕ್ಕಿ ಬೀಳುತ್ತೀರಿ. ಸುಮ್ಮನೇ ತಪ್ಪು ಒಪ್ಪಿಕೊಂಡರೆ ಕ್ರಮ ಕೈಗೊಳ್ಳುವುದಿಲ್ಲ. ಏನಂತೀರಾ?' ಮಕ್ಕಳಿಬ್ಬರೂ ತುಟಿ ಬಿಚ್ಚಲಿಲ್ಲ. ಅವರ ಮನದಲ್ಲಿ ಒಂದೇ ಸಂಶಯ.

ಮಷಿನ್ ಹೊಟ್ಟೆಯಲ್ಲಿರುವುದನ್ನೆಲ್ಲ ಪರದೆಯ ಮೇಲೆ ತೋರಬಲ್ಲದೇ? ಇಬ್ಬರೂ ಮೌನವಾಗಿ ನಿಂತರು. ಸರಿ, ಮಾಸ್ತರ್ ಎದ್ದು ನಿಂತು 'ಬನ್ನಿ, ಸ್ಕ್ಯಾನಿಂಗ್ ಮಾಡಿಸುತ್ತೇನೆ' ಎಂದು ಹೊರಟು ನಿಂತರು. ಈಗ ಮಕ್ಕಳಲ್ಲಿ ಕಂಪನ ಶುರುವಾಯಿತು. ಬೆಳಿಗ್ಗೆ ಅಪ್ಪ ದೇವರ ಮನೆಯಲ್ಲಿ ಪೂಜೆ ಮಾಡುತ್ತಿದ್ದು ಅಮ್ಮ ಹೊರಗೆ ತರಕಾರಿ ಕೊಳ್ಳುತ್ತಿದ್ದಾಗ ಇಬ್ಬರೂ ನಿಧಾನವಾಗಿ ಅಡುಗೆಮನೆ ಹೊಕ್ಕು ಒಂದಷ್ಟು ಉಂಡೆಗಳನ್ನು ಜೇಬಿಗಿಳಿಸಿ ಹೊರಬಂದು ಎದುರಿನ ಪಾರ್ಕಿನ ಮರದ ಕೆಳಗೆ ಕುಳಿತು ಮೆದ್ದುದು ಒಂದೊಂದಾಗಿ ನೆನಪಾಯಿತು. ಅಮ್ಮ ಲೆಕ್ಕ ಮಾಡಿ ಇಡಬಹುದೆಂಬ ಅಂದಾಜು ಇರಲಿಲ್ಲ. ಇನ್ನು ತಪ್ಪು ಒಪ್ಪಿಕೊಳ್ಳದಿದ್ದರೆ ಅಪ್ಪನಿಂದ ಹೊಡೆತ ಗ್ಯಾರಂಟಿ! ನಿಜ ಒಪ್ಪಿಕೊಳ್ಳುವುದೇ ಲೇಸೆನಿಸಿ ಮಾಸ್ತರ್ ಕಾಲಿಗೆ ಬಿದ್ದು ಅಪರಾಧ ಮನ್ನಿಸುವಂತೆ ಕೋರಿದರು. ಕಳ್ಳತನ ಮಹಾಪರಾಧ. ಬೇಕಿದ್ದರೆ ಕೇಳಿ ತೆಗೆದುಕೊಳ್ಳಿ ಎಂದು ಅಪ್ಪ ಅಮ್ಮ ಮಕ್ಕಳನ್ನು ಕ್ಷಮಿಸಿ ಅಪ್ಪಿಕೊಂಡರು.

---

ನೆರಳ ಸವಿಯನುಣುತ ಒಡನೆ
ನೀರು ಕುಡಿಯಲೆಂದು ನದಿಯ
ಕಡೆಗೆ ನಡೆಯಿತು

ನೀರೊಳಿರುವ ಬಿಂಬ ಕಂಡು
ಬೇರೆ ನಾಯಿ ಇದೆಂದುಕೊಂಡು
ತಪ್ಪು ತಿಳಿದ ಕ್ಷಣವೇ ಅದರ
ಎದೆಯು ಒಡೆಯಿತು

ಮರುಳುತನಕೆ ಮಾರು ಹೋಗಿ
ದುರುಳ ಬುದ್ಧಿ ತಲೆಗೆ ಏರಿ
ಹಸಿವ ಮರೆತು ಬೌ ಬೌ
ಎಂದು ಬೊಗಳಿತು

ತಿನ್ನಲೆಂದು ತಂದ ಎಲುಬು
ನೀರಿನಲ್ಲಿ ಮುಳುಗುತಿರಲು
ಕುಹಕಕಿದುವೆ ಶಿಕ್ಷೆ ಎಂದು
ತನ್ನ ತೆಗಳಿತು



## ಕುಂಚ ಪ್ರಪಂಚ



**ಅಶಿತಾ**
11ನೇ ತರಗತಿ,
ಡೆಲ್ಲಿ ಪಬ್ಲಿಕ್ ಸ್ಕೂಲ್,
ಬೆಂಗಳೂರು



ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in